**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ ನಂ : 1/2025**

**ಚಾ.ಸಾಃ 5, ಫ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ಗುಲಶಾನ್ ಆರಾ |
| ಗಂಡನ ಹೆಸರು | ಅಬ್ದುಲ್ ವಾಜಿದ್ |
| ವಯಸ್ಸು | 40 ವರ್ಷಗಳು |
| ಉದ್ಯೋಗ | ಗೃಹಿಣಿ |
| ವಾಸ್ತವ್ಯ | ಮಗದುಮ್ ಕಾಲೋನಿ, ಭಟ್ಕಳ |

**ಸಾಕ್ಷಿಯನ್ನು ದಿನಾಂಕಃ 18-11-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಸಾಕ್ಷಿಗೆ ಸಂಪೂರ್ಣವಾಗಿ ಕನ್ನಡ ಭಾಷೆ ಗೊತ್ತಿಲ್ಲವಾದ್ದರಿಂದ ಶ್ರೀ ಕೆ ಎಸ್ ಭಟ್ಟ ಹೊನ್ನಾವರ ರವರನ್ನು ಭಾಷಾಂತರಕಾರನಾಗಿ ನೇಮಿಸಿಕೊಳ್ಳಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ, ಭಾಷಾಂತರಕಾರರ ಮುಖಾಂತರ**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿದ್ದೇನೆ.

ದಿನಾಂಕಃ 28-06-2024 ರಂದು ನಾನು ಮತ್ತು ನನ್ನ ಗಂಡ ಶಿರಾಳಕುಪ್ಪಕ್ಕೆ ಹೋಗಲು ಓಮಿನಿ ಕಾರ ನಂ. ಕೆಎ-15-7831 ರಲ್ಲಿ ಭಟ್ಕಳದಿಂದ ಹೊರಟಿದ್ದೇವು. ಸದರಿ ಓಮಿನಿ ಕಾರನ್ನು ನನ್ನ ಗಂಡ ಓಡಿಸುತ್ತಿದ್ದನು. ಮದ್ಯಾಹ್ನ 2.00 ಗಂಟೆಗೆ ಭಟ್ಕಳದಿಂದ ಹೊರಟಿದ್ದು ಸಂಜೆ 4.30 ಗಂಟೆಯ ವೇಳೆಗೆ ಗೇರುಸೊಪ್ಪದ ಕೆಪಿಸಿ ಡ್ಯಾಮ್ ಹತ್ತಿರ ಹೋಗುತ್ತಿದ್ದಾಗ ಎದುರುಗಡೆಯಿಂದ ಒಂದು ಮಿನಿ ಬಸ್ ಬರುತ್ತಿದ್ದು ಅತೀ ವೇಗವಾಗಿ ಚಲಾಯಿಸಿಕೊಂಡು ಬಂದು ನಮ್ಮ ಕಡೆ ಬಂದು ನನ್ನ ಗಂಡ ರಸ್ತೆಯ ಎಡಭಾಗದಲ್ಲಿ ನಿಧಾನವಾಗಿ ಹೋಗುತ್ತಿದ್ದರು ಎದುರುಗಡೆಯಿಂದ ಬರುತ್ತಿದ್ದ ಮಿನಿ ಬಸ್ಸ ನಮ್ಮ ಓಮಿನಿ ಕಾರಗೆ ಡಿಕ್ಕಿಪಡಿಸಿರುತ್ತದೆ. ಸದರಿ ಅಪಘಾತದಿಂದ ನನ್ನ ಗಂಡನಿಗೆ ತಲೆಗೆ, ಮುಖಕ್ಕೆ, ಕೈಗೆ ಗಾಯಗಳಾಗಿದ್ದವು. ನನಗೆ ಎರಡು ಕೈಗೆ ಹಾಗೂ ಕಾಲುಗಳಿಗೆ ಏಟಾಗಿರುತ್ತದೆ.

ನಮಗೆ ಅಪಘಾತ ಮಾಡಿದ ಮಿನಿ ಬಸ್ಸ ನಂ. ಕೆಎ-51-7023 ಆಗಿದ್ದು, ಸದರಿ ಬಸ್ಸನ ಚಾಲಕನನ್ನು ನಾನು ನೋಡಿರುತ್ತೇನೆ. ಅಪಘಾತ ಸ್ಥಳದಲ್ಲಿ ಇದ್ದವರು ನನ್ನನ್ನು ಹಾಗೂ ನನ್ನ ಗಂಡನನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನನ್ನ ಗಂಡನನ್ನು ಹೆಚ್ಚಿನ ಚಿಕಿತ್ಸೆಗಾಗಿ ಉಡುಪಿಯ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆದರೆ ಅದೇ ದಿನ ಸಂಜೆ 6.30 ರ ಸಮಯಕ್ಕೆ ನನ್ನ ಗಂಡ ಮೃತಪಟ್ಟ ವಿಚಾರ ತಿಳಿಯಿತು.

ಎದುರಿನಿಂದ ಬಂದ ಮಿನಿ ಬಸ್ಸ ಚಾಲಕ ಬಸ್ಸನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ನಾವು ಹೋಗುತ್ತಿದ್ದ ಕಡೆಗೆ ಬಂದು ನಮಗೆ ಎದುರಿನಿಂದ ಡಿಕ್ಕಿ ಪಡಿಸಿದ್ದರಿಂದ ಸದರಿ ಅಪಘಾತ ಆಗಿರುತ್ತದೆ. ಬಸ್ಸನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್ ಎಲ್ ನಾಯ್ಕರವರಿಂದಃ**

ಕನ್ನಡ ಓದಲು ಬರೆಯಲು ಸ್ಪಷ್ಟವಾಗಿ ಬರುವುದಿಲ್ಲ. ಸ್ವಲ್ಪ ಸ್ವಲ್ಪ ಬರುತ್ತದೆ. ಪೊಲೀಸರಿಗೆ ನಾನು ಹೇಳಿಕೆ ಕೊಡುವಾಗ ಅವರು ಕನ್ನಡದಲ್ಲಿ ಕೇಳಿರುತ್ತಾರೆ. ನಾನು ಉರ್ದುವಿನಲ್ಲಿ ಹೇಳಿರುತ್ತೇನೆ. ಅಪಘಾತದ ಬಗ್ಗೆ ಪೊಲೀಸರ ಮುಂದೆ ಏನು ಹೇಳಿದ್ದೇನೆ ಎಂದು ನೆನಪಾಗುತ್ತಿಲ್ಲ, ಹೆಸರು ವಿಳಾಸ ಹೇಳಿದ್ದೇನೆ. ಪೊಲೀಸರಿಗೆ ನಾನು ಆಸ್ಪತ್ರೆಯಲ್ಲಿ ಇರುವಾಗ ನನ್ನ ಹೆಸರು ವಿಳಾಸ ಹಾಗೂ ವಿವರ ಹೇಳಿದ್ದೇನೆ.

ಅಪಘಾತ ಆದ ಸ್ಥಳದಲ್ಲಿ ದೊಡ್ಡ ತಿರುವು ಇದೆ ಎಂದರೆ ಸರಿ. ನಾವು ಹೊನ್ನಾವರದಿಂದ ಸಾಗರ ಕಡೆಗೆ ಹೋಗುವಾಗ ನಾವು ಹೋಗುತ್ತಿದ್ದ ರಸ್ತೆಯ ಎಡಬದಿಗೆ ಎದುರಿನಿಂದ ಬಂದ ಬಸ್ಸ ಬಂದಿದ್ದರಿಂದ ಅಪಘಾತ ಆಗಿದ್ದು, ಅಪಘಾತದ ಸ್ಥಳವು ನಾವು ಹೋಗುತ್ತಿದ್ದ ಎಡ ಬದಿಗೆ ಆಗಿರುತ್ತದೆ. ಅಪಘಾತ ಆದ ಸ್ಥಳದಿಂದ ಎಡ ಭಾಗಕ್ಕೆ ಒಂದು ವಾಹನ ಹೋಗುವಷ್ಟು ಜಾಗ ಇತ್ತು ಎಂದರೆ ಜಾಗ ಇರಲಿಲ್ಲ ಎನ್ನುತ್ತಾರೆ. ನಾನು ಆ ದಿನ ಓಮಿನಿ ಕಾರಿನಲ್ಲಿ ನನ್ನ ಗಂಡನ ಪಕ್ಕ ಮಂಭಾಗದಲ್ಲಿ ಕುಳಿತ್ತಿದ್ದೆ. ಎದುರುರಿನಿಂದ ಬರುತ್ತಿದ್ದ ಬಸ್ಸನು ಎಷ್ಟು ದೂರದಿಂದ ನೋಡಿರುತ್ತೀರಿ ಎಂದರೆ ನಾನು ಕಾರಿನಲ್ಲಿದ್ದಾಗ ಮುಂಭಾಗದಲ್ಲಿ ನೋಡುತ್ತಿದ್ದಾಗ ಎದುರಿನಿಂದ ಮಿನಿ ಬಸ್ಸ ಬರುತ್ತಿದ್ದುದು ಏಕಾ ಏಕಿ ನಮ್ಮ ಮೇಲೆ ಬಂದು ಡಿಕ್ಕಿ ಪಡಿಸಿರುತ್ತದೆ. ನಿಖರವಾಗಿ ಎಷ್ಟು ದೂರದಿಂದ ನೋಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಎದುರಿನಿಂದ ಬಸ್ಸ ಬರುತ್ತಿದ್ದಾಗ ಕಾರನ್ನು ಸಂಪೂರ್ಣವಾಗಿ ಎಡಕ್ಕೆ ತೆಗೆದುಕೊಳ್ಳುವಂತೆ ನಾನು ನನ್ನ ಗಂಡನಿಗೆ ಹೇಳಲಿಲ್ಲ, ಏಕಾ ಏಕಿ ಬಸ್ಸ ಬಂದು ಗುದ್ದಿರುತ್ತದೆ. ನಮ್ಮ ಓಮಿನಿ ಕಾರ ಮುಂದೆ ಯಾವುದೇ ವಾಹನ ಹೋಗುತ್ತಿರಲಿಲ್ಲ. ಬಸ್ಸನ ಮುಂದೆ ಸಹ ಯಾವುದೇ ವಾಹನ ಹೋಗುತ್ತಿರಲಿಲ್ಲ. ನಮ್ಮ ಕಾರಿನ ಬಲಭಾಗದಲ್ಲಿ ಒಂದು ವಾಹನ ಹೋಗುವಷ್ಟು ಜಾಗ ಇತ್ತು. ನನ್ನ ಮುಂದೆ ಬಸ್ಸ ಬರುತ್ತಿದ್ದುದನ್ನು ನೋಡಿದ್ದೇನೆ ಮತ್ತು ಅದು ವೇಗವಾಗಿ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯೇ ಬಸ್ಸನ್ನು ಚಲಾಯಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸ್ಸು ವೇಗವಾಗಿ ಬಂದು ನಮ್ಮ ಕಡೆಗೆ ತಿರುಗಿ ಕಾರಿಗೆ ಡಿಕ್ಕಿಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನೇ ಏಕಾ ಏಕಿ ಓಮಿನಿ ಕಾರನ್ನು ಬಲಕ್ಕೆ ತಿರುಗಿಸಿ ಬಸ್ಸಗೆ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿಯಲ್ಲ. ಪರಿಹಾರಕ್ಕೋಸ್ಕರ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**